**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**CC No.776/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಎಂ ಬಿ ಜಾವ್ರೋಜಿ | ಪಿಡಬ್ಲ್ಯೂ | 12 |
| ತಂದೆ ಹೆಸರು | : | ಭೀಮಪ್ಪ | ಸಿ ಡಬ್ಲ್ಯೂ | 13 |
| ವಯಸ್ಸು | : | 38 ವರ್ಷ | | |
| ಉದ್ಯೋಗ | : | ಸಿ ಪಿ ಸಿ 1364 ಬಂಕಾಪೂರ ಪೋಲಿಸ್ ಠಾಣೆ | | |
| ವಾಸ ಸ್ಥಳ | : | ಬಂಕಾಪೂರ | | |

**ದಿನಾಂಕ: 05.08.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು 2012 ರಿಂದ 2017 ರವರೆಗೆಆಡೂರು ಪೋಲಿಸ್ ಠಾಣೆಯಲ್ಲಿ ತನಿಖಾ ಸಹಾಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 29.11.2015 ರಂದು ಚಾಸಾ-18 ರವರ ಜೊತೆ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋಗಿ ಮೃತ ಬಸವರಾಜ ರವರ ಶವ ಪಂಚನಾಮೆಯನ್ನು ಮದ್ಯಾಹ್ನ 03.40 ರಿಂದ 04.40 ರವರೆಗೆ ಚಾಸಾ-18 ರವರು ಹೇಳಿದಂತೆ ಬರೆದಿರುತ್ತೇನೆ. ಹಾಗೂ ಶವ ಪಂಚನಾಮೆಯ ನಂತರ ಸದರಿ ಬಸವರಾಜ ಮೃತ ದೇಹವನ್ನು ಸದರಿ ವಾರಸುದಾರರಿಗೆ ಬಿಟ್ಟು ಕೊಟ್ಟಿರುತ್ತೇವೆ. ಸದರಿ ಶವ ಪಂಚನಾಮೆಯನ್ನು ಚಾಸಾ-6 ಮತ್ತು 7 ರವರ ಸಮಕ್ಷಮ ಜರುಗಿಸಲಾಗಿರುತ್ತದೆ. ಸದರಿ ಸಮಯದಲ್ಲಿ ತೆಗೆದ 2 ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ13 ಮತ್ತು 14 ಎಂದು ಗುರುತಿಸಲಾಯಿತು.

ದಿನಾಂಕ 30.11.2015 ರಂದು ಬೆಳಗಿನ ಜಾವ 09.00 ರಿಂದ 10.00 ರವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-18 ರವರು ಶವ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಚಾಸಾ-12 ರವರು ಬರೆದಿರುತ್ತಾರೆ. ಸದರಿ ಸಮಯದಲ್ಲಿ ನಾನು ನಮ್ಮ ಠಾಣೆಯ ಕ್ಯಾಮೇರಾದಿಂದ

ಪೊಟೋಗಳನ್ನು ತೆಗೆದಿರುತ್ತೇನೆ. ಸದರಿ ಪೊಟೋವನ್ನು ಸಾಕ್ಷಿ ನೋಡಿ ಗುರುತ್ತಿಸಿದ್ದು ಅದನ್ನು ಈಗಾಗಲೆ ನಿಪಿ3 ಎಂದು ಗುರುತಿಸಲಾಗಿದೆ. ಅದೇ ದಿನ ಠಾಣಾ ಆವರಣದಲ್ಲಿ ಬೆಳಿಗ್ಗೆ 11.00 ರಿಂದ 12.00 ರ ಸಮಯದಲ್ಲಿ ಚಾಸಾ-4 ಮತ್ತು 5 ರವರ ಚಾಸಾ-10 ರವರು ಹಾಜರುಪಡಿಸಿದ ಮೋಟಾರ ಸೈಕಲ್ ನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆಯನ್ನು ಚಾಸಾ-12 ರವರು ಬರೆದಿರುತ್ತಾರೆ. ಸದರಿ ಪಂಚನಾಮೆಗೆ ಮಾಹಿತಿಯನ್ನು ಚಾಸಾ-18 ರವರು ನೀಡಿರುತ್ತಾರೆ. ಸದರಿ ಸಮಯದಲ್ಲಿ ನಾನು ಪೊಟೋವನ್ನು ತೆಗೆದಿರುತ್ತೇನೆ ಸದರಿ ಪೊಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಮತ್ತು 6 ಎಂದು ಈಗಾಗಲೇ ಗುರುತಿಸಲಾಗಿದೆ. ಈ ಬಗ್ಗೆ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**:ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

ಆರೋಪಿ ಹಾಜರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಯಾವುದೇ ಸಮಂಜಸ ಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳಳಲಾಯಿತು.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ ಎಂ ಎಫ್ ಸಿ ಹಾನಗಲ್